ಪ್ರೀತಿಯೆನ್ನುವುದು ಜೀವಗಳನ್ನು ಒಂದುಗೂಡಿಸಿದರೆ, ಭಗ್ನಪ್ರೇಮ ಜೀವಿಗಳನ್ನು ಒಂಟಿಯಾಗಿಸಿ ಜೀವವನ್ನೇ ಬಲಿ ತೆಗೆದುಕೊಳ್ಳಬಹುದು. ಚರಿತ್ರೆಯಲ್ಲಿ ಇಂತಹ ಹಲವು ಪ್ರೇಮಿಗಳು ತಮ್ಮ ಗಾಢ ಪ್ರೀತಿ ಮತ್ತು ದುರಂತಮಯ ಅಂತ್ಯದ ಕಾರಣ ಅಜರಾಮರವಾಗಿ ದಾಖಲಾಗಿದ್ದಾರೆ. ರೋಮಿಯೋ–ಜೂಲಿಯಟ್ ಎನ್ನುವ ಇಟಾಲಿಯನ್ ಪ್ರೇಮಿಗಳು ಯಾರಿಗೆ ಗೊತ್ತಿಲ್ಲ? ಭಗ್ನಪ್ರೇಮದ ಕಥೆಗಳು ಪ್ರೀತಿಯ ಘನತೆಯನ್ನು, ಬೆಲೆಯನ್ನು ಹೆಚ್ಚಿಸಿ ಅದರ ಮೌಲ್ಯದ ಕುರುಹನ್ನು ನೀಡುತ್ತವೆ. ಪ್ರೀತಿಯೆನ್ನುವುದು ದೈಹಿಕ ಮಾತ್ರವಲ್ಲದೆ, ಭಾವನಾತ್ಮಕ ಅನುಭೂತಿಯೂ ಆಗಿರುವುದನ್ನು ರುಜುವಾತುಪಡಿಸುತ್ತವೆ.

ಭಾರತದಲ್ಲಿ ಮತ್ತು ವಿಶ್ವದಲ್ಲಿ ಪ್ರೀತಿಯನ್ನೇ ಆಧರಿಸಿ ಮಾಡಿದ ಸಾವಿರಾರು, ಲಕ್ಷಾಂತರ ಸಿನಿಮಾಗಳು ಅದೇ ತಿರುಳನ್ನು ಹೊಂದಿದ್ದರೂ ಪ್ರತಿಯೊಂದು ಸಿನಿಮಾವನ್ನು ಮತ್ತೆ ಮತ್ತೆ ನೋಡುವ ವೀಕ್ಷಕರಿದ್ದಾರೆ. ಸಿನಿಮಾದಲ್ಲಿ ಪ್ರೀತಿಯಲ್ಲಿರುವವರು ಗೆದ್ದರೆ ನಮಗೆ ಖುಷಿಯಾಗುತ್ತದೆ. ಅದೇ ರೀತಿ ಪ್ರೇಮಿಗಳು ಸೋತಾಗ ಕಂಬನಿ ಮಿಡಿಯುತ್ತೇವೆ. ಸಿನಿಮಾ ಕಮರ್ಷಿಯಲ್ ಆಗಲಿ, ಕಲಾತ್ಮಕವಾಗಲಿ ಅಥವಾ ಸಾಕ್ಷ್ಯಚಿತ್ರವೇ ಇರಲಿ, ಮನುಷ್ಯನ ಮನಸ್ಸನ್ನು ಕದಡಲು ಅದರಲ್ಲೊಂದು ಪ್ರೇಮಕಥೆ ಇರಲೇಬೇಕು. ಹಾಗಿದ್ದಲ್ಲಿ ಅದು ದುಪ್ಪಟ್ಟು ಯಶಸ್ಸನ್ನು ಕಾಣುವುದು ಖಂಡಿತ. ಸಾಹಿತ್ಯ, ನೃತ್ಯ, ನಾಟಕ ಇತ್ಯಾದಿ ಪ್ರಕಾರಗಳೂ ಇದೇ ಬಗೆಯ ಸ್ಪಂದನಗಳನ್ನು ನೀಡುತ್ತವೆ.

### ಮನಶಾಸ್ತ್ರದ ಲೆಕ್ಕಾಚಾರ

ಮನಶಾಸ್ತ್ರ ಪ್ರೀತಿಯನ್ನು ಸ್ವಲ್ಪ ಭಿನ್ನವಾಗಿ ವರ್ಣಿಸುತ್ತದೆ. ಪ್ರೀತಿಯೆನ್ನುವುದು ಮನುಷ್ಯನ ಮೂಲಭೂತ ಗ್ರಹಿಕೆ (cognitive) ಮತ್ತು ಸಾಮಾಜಿಕ (Social) ವರ್ತನೆ ಎಂದು ಹೇಳುತ್ತದೆ.

ರಾಬರ್ಟ್ ಸ್ಟೆರ್ನ್‌ಬರ್ಗ್ ಎನ್ನುವ ಮನಶ್ಶಾಸ್ತ್ರಜ್ಞ ಪ್ರೀತಿಯೆನ್ನುವುದನ್ನು ತ್ರಿಕೋನ ಸಿದ್ಧಾಂತ (Triangular theory of Love) ಎಂದು ಹೇಳುತ್ತಾನೆ. ನಿಕಟ ಅನ್ಯೋನ್ಯತೆ (intimacy), ಬದ್ಧತೆ (commitment) ಮತ್ತು ಅನುರಾಗ (passion) ಪ್ರೀತಿಯ ಮೂರು ಕೋನಗಳು ಎಂದು ವರ್ಣಿಸುತ್ತಾನೆ. ಈ ತ್ರಿಕೋನದಲ್ಲಿ ಯಾವುದೊಂದು ಇಲ್ಲದಿದ್ದರೂ ಅದು ಪ್ರೀತಿಯಾಗುವುದಿಲ್ಲ.





## ಬೇಂದ್ರೆ ಸಖೀಗೀತದ ಸೊಲ್ಲುಗಳು

ಸಖಿ! ನಮ್ಮ ಸಖ್ಯದ ಆಖ್ಯಾನ ಕಟುಮಧುರ
ವ್ಯಾಖ್ಯಾನದೊಡಗೂಡಿ ವಿವರಿಸಲೇ
ಕರುಳಿನ ತೊಡಕನು ಕುಸುರಾಗಿ ಬಿಡಿಸಿಟ್ಟು
ತೊಡವಾಗಿ ತಿರುಗೊಮ್ಮೆ ನಾ ಧರಿಸಲೇ

***

ತಾಂಡವ ನಡೆಸಿದ ಝುಂಝಾವಾತದ
ಕಾಲಿನ ಹುಲುಗೆಜ್ಜೆ ನಾವಾಗಿರೆ
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ!

***

ಬಾನಿಂದ ಬಾನಿಗೆ ಹಾಡಿನ ತಾನೊಂದು
ಸಖಿ-ಸಖಿ-ಸಖಿಯೆಂದು ತೂಗುತಿದೆ
ನಾನೂ ನೀನೂ ಸಖ-ಸಖಿ ಸಮ-ಸುಖಿ
ಎಂದೆನುತ ಮುಂದಕೆ ಹೋಗುತಿದೆ

***

ಅನ್ನಕೆ ಬಾಳಾಗಿ ಕಾಮಕೆ ಹೋಳಾಗಿ
ಮಾನಕೆ ಆಳಾಗಿ ಉಸಿರೆಳೆದುದು
ಬಾಳಲ್ಲ ಬದುಕಲ್ಲ; ಜೀವ ಜೀವಕೆ ಉ-
ದ್ದೀಪನವಾದುದೇ ಜೀವನವು.

***

ಅದು ಇದೆ ಎದೆಯಲ್ಲಿ, ಬೆಳಕಿನ ಬದಿಯಲ್ಲಿ
ರಸಗಂಗಾ ನದಿಯಲ್ಲಿ ಅದರುಗಮ
ಹೆಸರದಕೆ ಪ್ರೀತಿಯು, ಹಿಗ್ಗಿನ ರೀತಿಯು
ಆತ್ಮದ ನೀತಿಯು ಮಧುಸಂಗಮ